

# ಮುಟ್ಟಿದವನ ಪಾಡು

ಮುಗ್ಧತೆಯ ಕಾರಣಕ್ಕೇ ಸಮಾಜದ ಎದುರು ಅಪರಾಧಿಯಾಗಿ ಬಿಂಬಿಸಲಾಗುವ ವೃದ್ಧನೊಬ್ಬನ ಕಥೆ ಇದು. ನೈಜ ಘಟನೆಯನ್ನಾಧರಿಸಿದ ಈ ಕಿರುಚಿತ್ರ ವಲಸೆ, ಸಾಂಸ್ಕೃತಿಕ ಸ್ಥಿತ್ಯಂತರ, ಜನರೇಷನ್ ಗ್ಯಾಪ್ ಹೀಗೆ ಹಲವು ವಿಷಯಗಳ ಕುರಿತು ಮಾತಾಡುತ್ತದೆ.

■ ಗೌರಿ

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ಸುದ್ದಿಗಳನ್ನು ಪದೇ ಪದೇ ಕೇಳುತ್ತಲೇ ಇರುತ್ತೇವೆ. ಅದನ್ನು ತಡೆಗಟ್ಟಲು ಸಾಕಷ್ಟು ಕಟ್ಟುನಿಟ್ಟಿನ ಕಾನೂನುಗಳನ್ನೂ ತರಲಾಗಿದೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಕುರಿತ ಸಾಕಷ್ಟು ಸಿನಿಮಾಗಳೂ ಬಂದಿದೆ. ಆದರೆ ಈ ಸಮಸ್ಯೆಯನ್ನು ತಡೆಗಟ್ಟಲು ತಂದಿರುವ ಕಾನೂನುಗಳ ಬಿಗಿಮುಷ್ಟಿಯಲ್ಲಿ ಕೆಲವೊಮ್ಮೆ ಅಮಾಯಕರೂ ಸಿಲುಕಿಕೊಳ್ಳುವ ಸಾಧ್ಯತೆ ಇಲ್ಲವೇ? ಲುಲು ವಾಂಗ್ ನಿರ್ದೇಶನದ 'ಟಚ್' ಎಂಬ ಕಿರುಚಿತ್ರ ಹಾಗೆ ಶಿಕ್ಷೆಗೆ ಒಳಗಾದ ಒಬ್ಬ ನಿರಪರಾಧಿಯ ಕಥೆಯನ್ನು ಹೇಳುತ್ತದೆ.

ಇದು ಹೃದಯಕಲಕುವ ಕಥೆ. ಆದರೆ ಮನಕರಗಿಸಿ ಕಣ್ಣೀರು ಹಾಕಿ ಹಗುರಗೊಳಿಸುವ ಕಥೆಯಷ್ಟೇ ಖಂಡಿತ ಅಲ್ಲ. ಪ್ರತ್ಯಕ್ಷವಾಗಿ ಒಂದು ಕಥೆಯನ್ನು ಹೇಳುತ್ತಲೇ, ವಲಸೆಯ ದುರಂತಗಳು, ಪೀಳಿಗೆಯ ನಡುವಿನ ಅಂತರ ತಂದಿಕ್ಕುವ ಬಿರುಕುಗಳು, ವ್ಯವಸ್ಥೆಯ ಕ್ರೌರ್ಯ, ಅಂತರಂಗದಿಂದ ಉಕ್ಕುವ ಮನುಷ್ಯಸಹಜ ಮಮತೆಯನ್ನೂ ಅಭಿವ್ಯಕ್ತಿಸಲಾಗದ ವಿಪರ್ಯಾಸ – ಎಲ್ಲದರ ಕುರಿತೂ 'ಟಚ್' ಮಾತನಾಡುತ್ತದೆ.

ತೈವಾನ್‌ನಿಂದ ವಲಸೆ ಬಂದ ವೃದ್ಧನೊಬ್ಬ ಅಮೆರಿಕದಲ್ಲಿ ರಸ್ತೆಬದಿಯಲ್ಲಿ ಒಂದು ಅಂಗಡಿ ಹಾಕಿಕೊಂಡು ಬದುಕು ನಡೆಸುತ್ತಿದ್ದಾನೆ. ಅರವತ್ತೈದು ವರ್ಷದ ಆ ತಾತನನ್ನು ಕಂಡರೆ ಅಲ್ಲಿನ ಮಕ್ಕಳಿಗೆಲ್ಲ ಪ್ರೀತಿ. ಅಕ್ಕಪಕ್ಕದ ಅಂಗಡಿಯವರಿಗೆ ಯಾವ್ಯಾವುದೋ ಸಹಾಯಕ್ಕೂ ಅವನೇ ಬೇಕು. ಹೀಗೆ ಮುಗ್ಧತೆಯ ಸೆಲೆಯೇ ಉಕ್ಕುತ್ತಿರುವಂತೆ ಭಾಸವಾಗುವ ಅವನ ಹೆಸರು ಚೆನ್. ಹೆಂಡತಿ ಮತ್ತು ಮಗನ ಜೊತೆ ವಾಸವಾಗಿದ್ದಾನೆ.

ಒಂದು ದಿನ ಸಾರ್ವಜನಿಕ ಶೌಚಾಲಯದಲ್ಲಿ ಚೆನ್, ತನ್ನ ಪಕ್ಕ ಮೂತ್ರ ವಿಸರ್ಜಿಲು ನಿಂತ ನಾಲ್ಕೈದು ವರ್ಷದ ಪುಟ್ಟ ಪೋರನ ಮರ್ಮಾಂಗವನ್ನು ಮುಟ್ಟುತ್ತಾನೆ. ಆ ಸ್ಪರ್ಶದಲ್ಲಿ ಯಾವ ದುರುದ್ದೇಶವೂ ಇರುವುದಿಲ್ಲ. ಆದರೆ ಇದು ಗೊತ್ತಾಗಿ ಅವನ ಮೇಲೆ ಲೈಂಗಿಕ ದೌರ್ಜನ್ಯದ ಪ್ರಕರಣ ದಾಖಲಾಗುತ್ತದೆ. ಮಗುವಿನ ಮರ್ಮಾಂಗ ಮುಟ್ಟಿದ್ದನ್ನು ಅವನು ಯಾವ ಸಂಕೋಚವೂ ಇಲ್ಲದೇ ಒಪ್ಪಿಕೊಳ್ಳುತ್ತಾನೆ. ಜೈಲು ಪಾಲಾಗುತ್ತಾನೆ. ಅವನ ಮಗ ಮನೆಯನ್ನು ಅಡವಿಟ್ಟು ತಂದೆಯನ್ನು ಜಾಮೀನಿನ ಮೇಲೆ ಬಿಡಿಸಿಕೊಂಡು ಬರುತ್ತಾನೆ.



**ಹೆಸರು:** ಟಚ್ (ಇಂಗ್ಲಿಷ್)
**ನಿರ್ದೇಶಕರು:** ಲುಲು ವಾಂಗ್
**ನಿರ್ಮಾಣ:** ರೀನಾ ದತ್ ಮತ್ತು ಏಂಜೆಲ್ ಕ್ರಿಸ್ಟಿ ವಿಲಿಯಮ್ಸ್
**ಛಾಯಾಗ್ರಹಣ:** ಆವಾ ಬೆಕ್ರೋವ್‌ಸ್ಕಿ
**ಸಂಕಲನ:** ಮ್ಯಾಥ್ಯೂ ಫೈಡ್‌ಮನ್, ಆಡಂ ಕುರ್ನಿಟ್ಸ್
**ಸಂಗೀತ:** ಕುಕಾನ್ ಲೆಚೋವ್‌ಸ್ಕಿ
**ತಾರಾಗಣ:** ಚೆನ್ ಲಿನ್, ಚಿಚಿ ಲಾವು, ಜೋಶುವಾ ಚಾಂಗ್

'ಯಾಕೆ ಹೀಗೆ ಮಾಡಿದೆ' ಎಂದು ಕೇಳಿದರೆ 'ಅದರಲ್ಲೇನು ತಪ್ಪು' ಎಂಬುದು ಅವನ ಉತ್ತರ. ತೈವಾನ್‌ನಲ್ಲಿ ಚಿಕ್ಕ ಮಕ್ಕಳ ಮರ್ಮಾಂಗವನ್ನು ಮುಟ್ಟುವುದು ಸಂಸ್ಕೃತಿಯ ಭಾಗ. ತನ್ನನ್ನು ಬೈಯುವ ಮಗನಿಗೆ 'ನೀನು ಚಿಕ್ಕನಿದ್ದಾಗ ಬೀದಿಯಲ್ಲಿನ ಎಲ್ಲರೂ ನಿನ್ನ 'ಗುಬ್ಬಿ'ಯನ್ನು ಮುಟ್ಟುತ್ತಿದ್ದರು. ನಿನ್ನ ತಾತ ನಿನ್ನ ಗುಬ್ಬಿಗೆ ಒಮ್ಮೆ ಮುತ್ತಿಕ್ಕುವಾಗ ನೀನು ಸುಸೂ ಮಾಡಿಬಿಟ್ಟಿದ್ದೆ ನೆನಪಿದೆಯಾ?' ಎಂದೆಲ್ಲ ಅವನ ಬಾಲ್ಯವನ್ನೂ ನೆನಪಿಸುತ್ತಾನೆ. ಆದರೆ ಮಗ ಬೆಳೆದಿದ್ದು ಅಮೆರಿಕದಲ್ಲಿ. ರೂಪದಲ್ಲಿ, ದಾಖಲೆಯಲ್ಲಿ ತೈವಾನ್‌ನವನಾಗಿದ್ದರೂ ಮಾನಸಿಕವಾಗಿ ಅಮೆರಿಕನ್ನನೇ ಆಗಿದ್ದಾನೆ. ಅವನ ನಡೆ ನುಡಿಗಳಲ್ಲಿ, ಅಪ್ಪ–ಅಮ್ಮನ ವಿರುದ್ಧ ಸಿಡಿಮಿಡಿಗೊಳ್ಳುವುದರಲ್ಲಿಯೇ ಅದು ವ್ಯಕ್ತವಾಗುತ್ತದೆ.

'ಅಪ್ಪನಿಂದಾಗಿ ನನಗೆ ಅವಮಾನ ಆಯ್ತು' ಎನ್ನುವ ಮಗನಿಗೆ, 'ಅವಮಾನ ಎಂದರೆ ಏನು ಎಂದು ನನಗೆ ಗೊತ್ತು' ಎಂದು ಚೆನ್ ತನ್ನ ಕಥೆಯನ್ನು ಹೇಳುತ್ತಾನೆ. ಬದುಕಿನುದ್ದಕ್ಕೂ ಚೆನ್ ಚಿಕ್ಕವನಾಗಿದ್ದಾಗ ಅವನ ಮರ್ಮಾಂಗಕ್ಕೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಹಾಗಾಗಿ ಅವನ ಮರ್ಮಾಂಗ ವಿರೂಪಗೊಂಡಿತ್ತು. ಸಾರ್ವಜನಿಕ ಶೌಚಾಲಯದಲ್ಲಿ ತನ್ನ ಪಕ್ಕ ಮೂತ್ರ ವಿಸರ್ಜಿಸುತ್ತಿದ್ದ ಪುಟ್ಟ ಬಾಲಕನ ಮರ್ಮಾಂಗಕ್ಕೂ ಅದೇ ಶಸ್ತ್ರಚಿಕಿತ್ಸೆ ಆಗಿ ವಿರೂಪಗೊಂಡಿರುವುದನ್ನು ಚೆನ್ ನೋಡುತ್ತಾನೆ. ತಾನು ಅನುಭವಿಸಿದ ಅವಮಾನ ಅವನು ಅನುಭವಿಸದೇ ಇರಲಿ ಎಂದುಕೊಂಡು ಆ ಬಾಲಕನ ಮರ್ಮಾಂಗ ಮುಟ್ಟಿ 'ಬ್ಯೂಟಿಫುಲ್' ಎಂದು ಉದ್ಗರಿಸುತ್ತಾನೆ. ಅದೇ ಅವನಿಗೆ ಮುಳುವಾಗುತ್ತದೆ.

ಮುಗ್ಧತೆ ಮತ್ತು ವ್ಯವಸ್ಥೆಯ ಕ್ರೌರ್ಯ ಎರಡನ್ನೂ ಮುಖಾಮುಖಿಯಾಗಿಸುವ ಹಲವು ಶಕ್ತಕೇಂದ್ರಗಳು ಈ ಕಿರುಚಿತ್ರದಲ್ಲಿವೆ. ಮನೆಯಿಂದ ಹೊರಗೆ ಬಂದು ನಿಂತಾಗ ಪಿಚಕಾರಿಯಲ್ಲಿ ನೀರು ಸಿಡಿಸಿಕೊಂಡು ಆಟವಾಡುತ್ತಿರುವ ಮಕ್ಕಳು ಚೆನ್‌ನ ಮೈಗೂ ನೀರು ಸಿಡಿಸುತ್ತಾರೆ. ಆದರೆ ಅವರ ಜೊತೆ ಬೆರೆಯಲು ಅವನಿಗೆ ಹಿಂಜರಿಕೆಯಾಗುತ್ತದೆ. ಹೀಗೆ ರಕ್ಷಣೆಯ ಹೆಸರಿನ ಕಟ್ಟಳೆಗಳು ನಮ್ಮ ಸಹಜಮಮತೆಯ ಹರಿವಿಗೂ ಅಡ್ಡವಾಗುವ ವಿಪರ್ಯಾಸವನ್ನು ಪರಿಣಾಮಕಾರಿಯಾಗಿ ಬಿಂಬಿಸುವ ಕಿರುಚಿತ್ರವಿದು.

ಈ ಕಿರುಚಿತ್ರ ವೀಕ್ಷಣೆಗೆ bit.ly/2SrFzxf ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.